**ಸಿ.ಸಿ.ನಂ.:**2526/2025

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **31-12-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು -ಆರೋಪಿ ಪರ ಶ್ರೀ ವಿ.ಎಸ್.ಹೆಚ್. ವಕೀಲರಿಂದ</u>**

ನಮ್ಮ ಫಿರ್ಯಾರ್ದಿ ಸಂಸ್ಥೆಗೆ ಸಾಲವನ್ನು ಪಡೆದುಕೊಳ್ಳಲು ಸಾಲಗಾರರು ಬಂದಿರುತ್ತಾರೆ. ನಿಪಿ.7ರಲ್ಲಿ 1 ಲಕ್ಷ ರೂಪಾಯಿಯನ್ನು ಕೇಳಿ ಸಾಲದ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲಗಾರರು ಸಾಲದ ಅರ್ಜಿಯನ್ನು ನಮ್ಮ ಮುಖ್ಯ ಕಚೇರಿಗೆ ಕಳುಹಿಸಿರುತ್ತಾರೆ. ನಮ್ಮ ಮುಖ್ಯ ಕಚೇರಿಯಿಂದ ಸಾಲಗಾರರು ಬೇಡಿಕೆ ಇಟ್ಟಂತಹ ಮೊತ್ತಕ್ಕೆ ಸಾಲವು ಮಂಜೂರಾಗಿರುತ್ತದೆ. ಸಾಲಗಾರರಿಗೆ ಸಾಲ ಮಂಜೂರಾದ ಬಗ್ಗೆ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಆರೋಪಿಗೆ ಲಕ್ಷ ರೂಪಾಯಿಯನ್ನು ಮಂಜೂರು ಮಾಡಿರುತ್ತೇವೆ. ಸಾಲದ ಭದ್ರತೆಗಾಗಿ ಜಾಮೀನುದಾರರನ್ನು ತೆಗೆದುಕೊಂಡಿರುತ್ತೇವೆ. ಸಾಲಗಾರರ ಉದ್ಯೋಗ ಹಾಗೂ ಸ್ಥಿತಿಗತಿಯ ಕುರಿತಾಗಿ ವಿಚಾರಿಸಿರುತ್ತೇವೆ. ಸಾಲಗಾರರು ಪೇಂಟಿಂಗ್ ಕೆಲಸಕ್ಕೆ ಹೋಗುತ್ತಾರೆ.

ಸಾಲಗಾರನಿಗೆ ವ್ಯವಹಾರದ ಉದ್ದೇಶಕ್ಕಾಗಿ ಸಾಲವನ್ನು ನೀಡಿರುತ್ತೇವೆ. ಸಾಲಗಾರರು ಸಾಲಕ್ಕಾಕಾಗಿ ಅರ್ಜಿಯನ್ನು ಸಲ್ಲಿಸುವ ಸಂದರ್ಬದಲ್ಲಿ ನಾನು ಮ್ಯಾನೇಜರ್ ಆಗಿರುವುದಿಲ್ಲ. ಈ ಪ್ರಕರಣದ ಆರೋಪಿತನು ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ ಜಾಮೀನುದಾರರಾಗಿರುತ್ತಾರೆ. ಸಾಲದ ಮರು ಪಾವತಿಯನ್ನು ಕೇಳಿ ಸಾಲಗಾರನಿಗೆ ನೋಟಿಸ್ ನ್ನು ನೀಡಿರುತ್ತೇವೆ. ಸದರಿ ನೋಟಿಸ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಮುಂದಿನ ದಿಾನಕಗಳಲ್ಲಿ ಹಾಜರುಪಡಿಸುತ್ತೇವೆ. ಸಾಲದ ಹಣದ ಮರುಪಾವತಿಗಾಗಿ ಸಾಲಗಾರನಿಗೆ ಯಾವುದೇ ನೊಟಿಸ್ ನ್ನು

ನೀಡಲಿಲ್ಲ ಎಂದರೆ ಸರಿಯಲ್ಲ. ಸಾಲವನ್ನು ನೀಡುವ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಮ್ಯಾನೇಜರ್ ಆಗದೇ ಇರುವುದರಿಂದ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಹೆ.ಪ್ರ.ದ.ನ್ಯಾ.ದಂ. ಕುಮಟಾ